


# ಪಶ್ಚಿಮ ಘಟ್ಟದ ಕೆರೆಗಳು ಮತ್ತು ಜಲಮೂಲಗಳ ಅಧ್ಯಯನ 2014

## ಭೈರುಂಬೆ ಗ್ರಾಮ

# ಸಂಸ್ಥೆ : ಶ್ರೀ ಶಾರದಾಂಬಾ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಭೈರುಂಬೆ

- ಕುಮಾರಿ ಅಮೃತಾ ಹೆಗಡೆ, ವಿದ್ಯಾರ್ಥಿನಿ, 8ನೇ ತರಗತಿ
- ಕುಮಾರಿ ವಂದಿತಾ ಹೆಗಡೆ, ವಿದ್ಯಾರ್ಥಿನಿ, 8ನೇ ತರಗತಿ

- ಮಾರ್ಗದರ್ಶನ : ಕು.ಮಧುರಾ ಹೆಗಡೆ, ಶಿಕ್ಷಕರು
- ಕು.ರಾಜೇಶ್ವರಿ ಭಟ್, ಶಿಕ್ಷಕರು

# ಶ್ರೀ ಶಾರದಾಂಬಾ ಶಿಕ್ಷಣ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಭೈರುಂಬೆ



# ಜಲಮೂಲಗಳ ಮಹತ್ವ

- ನಮ್ಮ ಈ ಭೂಮಿ ಒಂದು ಜಲಗೋಳ ಅಥವಾ ಜಲಗ್ರಹ. ಇದರಲ್ಲಿ ನಾಗರೀಕತೆಯ ಉಗಮ ಹಾಗೂ ಬೆಳವಣಿಗೆ ಜಲಮೂಲಗಳನ್ನು, ವಿಶೇಷವಾಗಿ ನದಿಗಳನ್ನು ಆಧರಿಸಿ ಉಂಟಾಗಿದೆ. ನೀರಿಲ್ಲದೇ ಬದುಕಿಲ್ಲ.
- ಜನಸಂಖ್ಯೆ ಹೆಚ್ಚಾದಂತೆ ಅಥವಾ ನದಿಗಳ ಪಾತಳಿ ಬದಲಾದಂತೆ ಜನತೆ ನೈಸರ್ಗಿಕ ಅಥವಾ ಕೃತಕ ಜಲಮೂಲಗಳಾದ ಸರೋವರ, ಕೆರೆ, ಝುರಿ, ಬಾವಿ, ಮುಂತಾದವುಗಳನ್ನು ಬಳಿ ಸಾಗಿ ಜೀವನ ನಡೆಸಿದ್ದಾರೆ.

# ಜಲಮೂಲಗಳ ಪ್ರಮುಖ ಉಪಯೋಗ



- ನೀರಾವರಿ
- ಕುಡಿಯುವ ನೀರು ಪೂರೈಕೆ
- ಬಟ್ಟೆ, ಪಾತ್ರೆ, ದನ-ಕರು, ಇತ್ಯಾದಿ ತೊಳೆಯಲು
- ದೇವತಾರ್ಚನೆ ಹಾಗೂ ಉತ್ಸವಗಳು
- ಅಂತರ್ಜಲ ವರ್ಧನೆ
- ಕೆಳಭಾಗದ ನೀರಿನ ಗುಣಮಟ್ಟ ಕಾಯ್ದುಕೊಳ್ಳುವಿಕೆ
- ಮೀನುಗಾರಿಕೆ
- ಪಕ್ಷಿಧಾಮ



# ಭೈರುಂಬೆ ಗ್ರಾಮದ ಜಲಮೂಲಗಳು



1) ***ಶಾಲ್ಮಲಾ ನದಿ ಅಥವಾ ಹೊಳೆ***

ಭೈರುಂಬೆ ಗ್ರಾಮದಲ್ಲಿ ಹೊಳೆಯಾಗಿ ಹರಿಯುವ ಈ ಪ್ರಮುಖ ಜಲಮೂಲ ಗ್ರಾಮದ ಗಡಿಯ ನಂತರ ಅಂದಳ್ಳಿಯಿಂದ ಬರುವ ಹೊಳೆಯೊಡನೆ ಸೇರಿ ಜಿಲ್ಲೆಯ ಪ್ರಮುಖ ನದಿಯಾಗುತ್ತದೆ. ಈ ನದಿಯಲ್ಲಿರುವ ಪ್ರಖ್ಯಾತ ಪ್ರವಾಸಿ ತಾಣ "ಸಹಸ್ರಲಿಂಗ" ಪಕ್ಕದ ಹುಳಗೋಳ ಗ್ರಾಮದಲ್ಲಿದೆ. ಭೈರುಂಬೆ ಗ್ರಾಮದಲ್ಲಿ ಇದು ಸುಮಾರು 4 ಕಿ.ಮಿ. ದೂರ ಹರಿಯುತ್ತದೆ. ಎಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ನೀರ ಹರಿವು ಕಡಿಮೆ ಆಗುತ್ತದೆ.

# ಶಾಲ್ಮಲಾ ನದಿಗೆ ಭೈರುಂಬೆ ಗ್ರಾಮದಲ್ಲಿ ಸೇರುವ ಹಳ್ಳಗಳು:

1) ಹೊಸಕೆರೆ ಹಳ್ಳ
2) ಕೆರೆಸರ ಹಳ್ಳ
3) ನಿಡಗೋಡು ಹಳ್ಳ–1
4) ನಿಡಗೋಡು ಹಳ್ಳ–2
5) ಕಾಳೀಸರ ಹಳ್ಳ

# ಶಾಲ್ಮಲಾ ನದಿಯ ಹರಿವು (ವಿಕಿಮ್ಯಾಪಿಯಾದಿಂದ)



# ಶಾಲ್ಮಲಾ ನದಿಯ ಹರಿವಿನ ನಕ್ಷೆ



## 2) ಕೆರೆಗಳು : ಗ್ರಾಮದಲ್ಲಿ ಒಟ್ಟೂ 5 ಕೆರೆಗಳಿವೆ.

| ಸಂ. | ಕೆರೆಯ ಹೆಸರು | ವಿಸ್ತೀರ್ಣ |
|---|---|---|
| ಅ) | ಕೆರೆಸರ ಕೆರೆ–1 | 0–10–00 ಗುಂಟೆ |
| ಬ) | ಕೆರೆಸರ ಕೆರೆ–2 | 0–15–00 ಗುಂಟೆ |
| ಕ) | ನಾಗರಕುರ ಕೆರೆ | 0–20–00 ಗುಂಟೆ |
| ಡ) | ಬೀರಲ ಕೆರೆ | 0–20–00 ಗುಂಟೆ |
| ಇ) | ಮುಳಕಿನಕೊಪ್ಪ ಕೆರೆ | 0–10–00 ಗುಂಟೆ |

# ಕೆರೆಸರ ಕೆರೆ–1



# ಕೆರೆಸರ ಕೆರೆ–2



# ಬೀರಲ ಕೆರೆ



# ನಾಗರಕುರ ಕೆರೆ



# ಮುಳಕಿನಕೊಪ್ಪ ಕೆರೆ



3) ಬಾವಿಗಳು : ಈ ಗ್ರಾಮದಲ್ಲಿ ಒಟ್ಟೂ 27 ಬಾವಿಗಳು ಇವೆ. ಪ್ರತಿ ಮನೆಯಲ್ಲೂ ಮನೆಬಳಕೆ ಹಾಗೂ ಕುಡಿಯುವ ನೀರಿಗಾಗಿ ಬಾವಿ ಇದೆ. ಬೆಸಿಗೆಯಲ್ಲಿ ನೀರಿನ ಪ್ರಮಾಣ ಸ್ವಲ್ಪ ಕಡಿಮೆ ಆಗುತ್ತದೆ. ಆದರೆ ನೀರಿನ ಅಭಾವ ಉಂಟಾಗುವುದಿಲ್ಲ. ಕೆಲವು ಕೃಷಿ ಕಾರ್ಮಿಕರ ಮನೆಗಳಲ್ಲಿ ಬಾವಿಗಳಿಲ್ಲ. ಭೈರುಂಬೆ ಪಂಚಾಯತ, ಅದರ ಸುತ್ತಲೂ ವಾಸವಾಗಿರುವ ಹರಿಜನರು ಹಾಗೂ ಇನ್ನಿತೆರರಿಗೆ ನಾಗರಕುರದಲ್ಲಿರುವ ಕೊಳವೆ ಬಾವಿಯಿಂದ ಕುಡಿಯುವ ನೀರನ್ನು ಪೂರೈಕೆ ಮಾಡುತ್ತದೆ.

# 4) ಕೊಳವೆ ಬಾವಿ

- ಈ ಭಾಗದಲ್ಲಿ ಕೊಳವೆ ಬಾವಿ ಯಶಸ್ವಿಯಾಗಿಲ್ಲ. ನಾವು ಆಯ್ಕೆ ಮಾಡಿಕೊಂಡ ಕೆರೆಯ ಮಾಲಕರು ಒಟ್ಟು 23 ಕೊಳವೆ ಬಾವಿ ತೆಗೆಸಿದ್ದು ಅವುಗಳಲ್ಲಿ ಕೇವಲ ಒಂದರಲ್ಲಿ ಮಾತ್ರ ನೀರು ದೊರಕಿದೆ.

5) ಜಲಪಾತ: ಈ ನದಿಗೆ (ಹೊಳೆಗೆ) ಭೈರುಂಬೆ ದೇವಾಲಯದ ಸಮೀಪ ಶಿರಕಲಗುಂಡಿ ಎಂಬ ಸಣ್ಣ ಜಲಪಾತ ಇದೆ. ಇದರ ಎತ್ತರ ಸುಮಾರು 3 ಮೀಟರ್.



# ಶಿರಕಲಗುಂಡಿಯಿಂದ ಗದ್ದೆಗೆ ಅಡಿಕೆ ಹರಿಣಿಯಿಂದ ನೀರು ಒಯ್ಯುವುದು



# ಕೆರೆಸರ ಕೆರೆ–1ರ ಸುತ್ತಲಿನ ಪರಿಸರ

- ಈ ಕೆರೆಯಿಂದ 150 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ಮನೆ ಇಲ್ಲ.
- ಕೆರೆಯ ಮೇಲ್ಭಾಗದಲ್ಲಿ ಕೆರೆಸರ ಕೆರೆ–2 ಇದೆ.
- ಕೆರೆಯ ಕೆಳ ಭಾಗದಲ್ಲಿ ಕೆರೆಯ ಮಾಲಿಕರಾದ ಶ್ರೀ ರಾಮಚಂದ್ರ ಹೆಗಡೆ ಗಡಿಕೈ ಇವರ ತೆಂಗಿನ ತೋಟ ಇದೆ.
- ಕೆರಯ ಅಕ್ಕ–ಪಕ್ಕದಲ್ಲಿ ಕಾಯ್ದಿಟ್ಟ ಅರಣ್ಯ ಇದೆ. ಕೆರೆಸರ ಕೆರೆ–2ರ ನಂತರ ಭೈರುಂಬೆ ಗ್ರಾಮದ ದೇವರಕಾನುಗಳಲ್ಲಿ ಒಂದಾದ ಬಸಪ್ಪನ ಕಾನು ಇದೆ.
- ಸುಮಾರು 30 ವರ್ಷಗಳ ಹಿಂದೆ ಹೂಳು ತುಂಬಿದ್ದ ಈ ಕೆರೆಯನ್ನು ಅದರ ಮಾಲಕರು ಸಂಪೂರ್ಣ ಸರಿಪಡಿಸಿ ಕೆರೆಯ ಸುತ್ತಲು ಅಗಳ ತೆಗೆಸಿ ಹೊರಗಿನ ನೀರು ಕೆರೆಗೆ ಹೋಗದಂತೆ ರಕ್ಷಣೆ ನೀಡಿದ್ದಾರೆ. ಕೆರೆಯಲ್ಲಿ ಫೆಬ್ರವರಿಯವರೆಗೆ ಸುಮಾರು 12 ಅಡಿ ನೀರು ಇರುತ್ತದೆ. ಎಪ್ರಿಲ್–ಮೇ ತಿಂಗಳುಗಳಲ್ಲಿ 10 ಅಡಿ ನೀರು ಇರುತ್ತದೆ.

• ಈ ಕೆರೆಯ ಸುತ್ತಲೂ ಗಣಿಗಾರಿಕೆ, ಮರಳು ಕ್ವಾರಿ, ಕಲ್ಲು ಕ್ವಾರಿ, ಇತ್ಯಾದಿ ಯಾವುದೂ ಇಲ್ಲ.

• ಈ ಕೆರೆಯನ್ನು ಹೂಳು ತೆಗೆದು ಆಳವನ್ನು ಹಾಗೂ ವಿಸ್ತೀರ್ಣವನ್ನು ಹೆಚ್ಚಿಸಿದ ಸಂದರ್ಭದಲ್ಲಿ ಆಗಮಿಸಿದ್ದ ಭಾರತೀಯ ವಿಜ್ಞಾನ ಮಂದಿರದ ವಿಜ್ಞಾನಿ ಡಾ.ರಾಮಪ್ರಸಾದ ಅವರು ಇದರಲ್ಲಿ ನೀರನ್ನು ನಿಲ್ಲಿಸುವುದರಿಂದ ಕೆಳಭಾಗದಲ್ಲಿರುವ ಬಾವಿಗಳಲ್ಲಿ ನೀರಿನ ಪ್ರಮಾಣ ಹೆಚ್ಚಾಗುತ್ತದೆ. ಇದಕ್ಕೆ "ಪರ್ಕೋಲೇಶನ್ ಟ್ಯಾಂಕ್" (ಕಜಡಿಛಿಂಟಚಿಣುಂಟಿ ಖಿಚಿಟಿಇ) ಎಂದು ಕರೆಯುತ್ತಾರೆ ಎನ್ನುವ ವಿವರಣೆ ನೀಡಿದ್ದರು ಎಂದು ಮಾಲಕರು ಸ್ಮರಿಸುತ್ತಾರೆ.

•ಈ ಕೆರೆಯಲ್ಲಿ ನೈಸರ್ಗಿಕವಾಗಿ "ಜಬ್ಬು" ಎನ್ನುವ ಮೀನು ಬೆಳೆಯುತ್ತದೆ. ಅದನ್ನು ವರ್ಷದ ಕೊನೆಯಲ್ಲಿ ಸಂಗ್ರಹಿಸಿ ಕೃಷಿ–ಕಾರ್ಮಿಕರು ಹಂಚಿಕೊಳ್ಳುತ್ತಾರೆ ಎಂದು ಉದಯ ಲಮಾಣಿ ತಿಳಿಸಿದ್ದಾರೆ. ಇದನ್ನು ಹೊರತು ಪಡಿಸಿದರೆ ಈ ಭಾಗದಲ್ಲಿ ಮೀನುಗಾರಿಕೆ ಇಲ್ಲ. ಮೀನುಗಾರರೂ ಇಲ್ಲ.

•ಕೆಲವೊಮ್ಮೆ ಕೃಷಿ ಕಾರ್ಮಿಕರು ಆಹಾರಕ್ಕಾಗಿ ಏಡಿಯನ್ನು ಹಿಡಿಯುತ್ತಾರೆ.

•ಕೆರೆಯಲ್ಲಿ ಹಾಗೂ ಅದರ ಸುತ್ತಲೂ ಎರಡು ಜಾತಿಯ ಕಪ್ಪೆಗಳು ಕಾಣ ಸಿಗುತ್ತವೆ. ಆದರೆ ಅವುಗಳ ಪ್ರಬೇಧದ ಪರಿಚಯ ಸ್ಥಳೀಯರಿಗೆ ಇಲ್ಲ.

## ಜಲದೃಶ್ಯದ ಸುತ್ತಲಿನ ಔಷಧ ಸಸ್ಯಗಳು

ಈ ಭಾಗದಲ್ಲಿ ಕಂಡು ಬರುವ ಬಹುತೇಕ ಔಷಧ ಸಸ್ಯಗಳು ಇಲ್ಲಿಯೂ ಇವೆ:




ಒಂದೆಲಗ (ಉರಿಗೆಜಡ್ಡು) – ಸಮೂಲಾಗ್ರ – ಪಿತ್ಥಶಾಮಕ, ಮೇಧೋವರ್ಧಕ




| | | |
|---|---|---|
| ಭೃಂಗರಾಜ | ಎಲೆ | ಯಕೃತ್ ರೋಗ ಶಾಮಕ |




| | | |
|---|---|---|
| ನೆಲನೆಲ್ಲಿ (ಭೂಆಮಲಕಿ) | ಸಮೂಲಾಗ್ರ | ಯಕೃತ್ ರೋಗ ಶಾಮಕ |




| | | |
|---|---|---|
| ಉತ್ತರಣೆ | ಎಲೆ ಽ ಬೇರು | ನೋವು ನಿವಾರಕ, ಸಮಿತ್ತು |




| | | |
|---|---|---|
| ಕಾಡುಬದನೆ (ನೆಲಗುಳ್ಳ) | ಕಾಯಿ | ಕಫನಿವಾರಕ (ಕಂಟಕಾರಿ ಅವಲೇಹ) |




| | | |
|---|---|---|
| ಕೊಡಸ (ಕುಟಜ) | ತೊಗಟೆ | ಅತಿಸಾರ ನಿವಾರಕ (ಕುಟಜಾರಿಷ್ಟ) |



| | | |
|---|---|---|
| ಅಶೋಕ | ತೊಗಟೆ | ಮುಟ್ಟಿನ ಸಮಸ್ಯೆ (ಅಶೋಕಾರಿಷ್ಟ) |




| | | |
|---|---|---|
| ಅಮೃತ ಬಳ್ಳಿ | ದಂಟು | ಜ್ವರಹರ (ಅಮೃತಾರಿಷ್ಟ) |




| | | |
|---|---|---|
| ಕಾಗೆಹಣ್ಣು (ಕಾಕಮಾಚಿ) | ಸೊಪ್ಪು ದಂಟು | ಮಲಬದ್ಧತೆ ನಿವಾರಕ |




| | | |
|---|---|---|
| ಟಿಕ್ಕಿಗಿಡ (ವ್ರಣರೋಪಣೀ) | ಎಲೆ | ರಕ್ತಸ್ರಾವ ನಿಲ್ಲಿಸಲು |

| | | |
|---|---|---|
| ಭದ್ರಮುಷ್ಠಿ | ಬೇರು | ಶಕ್ತಿವರ್ಧಕ (ಮುಸ್ತಾರಿಷ್ಟ) |



| | | |
|---|---|---|
| ಇಲಿಕಿವಿ ಸೊಪ್ಪು | ಸಮೂಲಾಗ್ರ | ನರರೋಗ ನಿವಾರಕ |



| | | |
|---|---|---|
| ನಾಚಿಕೆ ಮುಳ್ಳು (ಲಜ್ಜಾಲು) | ಸಮೂಲಾಗ್ರ | ಮೂಲವ್ಯಾಧಿ ಚಿಕಿತ್ಸೆ (ಲಜ್ಜಾಲು ತೈಲ) |




| | | |
|---|---|---|
| ತಗಟೆ (ತಗಚೆ) (ಚಕ್ರಮರ್ದ) | ಎಲೆ | ವಿರೇಚಕ, ಯಕೃತ್ ತೊಂದರೆಗಳಲ್ಲಿ |



| | | |
|---|---|---|
| ಹುಳಿಸೊಪ್ಪು (ಆಮ್ಲಪತ್ರೆ) | ಎಲೆ | ಜ್ವರಹರ, ವಿಷಹರ |



| | | |
|---|---|---|
| ಹಾಲುಕುಟೀರಿರ | ಎಲೆ | ಬಾಯಿಹುಗುಳು ನಿವಾರಣೆ (ಅಗ್ರದ ಹುಗುಳು) |



| | | |
|---|---|---|
| ಕಳ್ಳಂಗಡಲೆ (ಬಲ) | ಬೇರು | ಶಕ್ತಿವರ್ಧಕ (ಬಲಾರಿಷ್ಟ) |



| | | |
|---|---|---|
| ಶ್ರೀಗಂಧ | ಕಾಂಡ | ಪಿತ್ಥನಿವಾರಕ |

# ಆಹಾರಕ್ಕಾಗಿ ಬಳಸುವ ಸಸ್ಯಗಳ ಅವಲೋಕನ



| | | |
|---|---|---|
| ಕರಿಬೆವು | ಎಲೆಗಳು | ಅಡುಗೆ (ಒಗ್ಗರಣೆ) |



| | | |
|---|---|---|
| ನೇರಳೆ | ಹಣ್ಣು | ತಿನ್ನುವುದಕ್ಕೆ s ಔಷಧ |



| | | |
|---|---|---|
| ಮುರುಗಲು | ಹಣ್ಣು | ಪಿತ್ಥನಿವಾರಕ (ಪಾನಕ ಮತ್ತು ಪದಾರ್ಥಗಳು) |



| | | |
|---|---|---|
| ಸಂಪಿಗೆ ಹಣ್ಣು | ಹಣ್ಣು | ತಿನ್ನಲು |




| | | |
|---|---|---|
| ಗುಡ್ಡೆಗೇರು (ಭಲ್ಲಾತಕ) | ಹಣ್ಣು | ಕಫಹರ |



| | | |
|---|---|---|
| ಹೆಬ್ಬಲಸು | ಹಣ್ಣು | ತಿನ್ನಲು |



| | | |
|---|---|---|
| ಹುಣಿಸೆ | ಹಣ್ಣು | ಅಡುಗೆ |



| | | |
|---|---|---|
| ನೆಲ್ಲಿ | ಕಾಯಿ | ತ್ರಿದೋಷಹರ (ಅಡುಗೆ) |



| ವಾಟೆ | ಕಾಯಿ | ಅಡುಗೆ |
| --- | --- | --- |
| | | |



| | | |
|---|---|---|
| ದಾಲ್ಚಿನ್ನಿ | ತೊಗಟೆ s ಎಲೆ | ಅಡುಗೆ |

# ಆಹಾರಕ್ಕಾಗಿ ಬಳಸುವ ಇನ್ನಿತರ ಸಸ್ಯಗಳು

- ನುರುಕಲು – ಹಣ್ಣು – ತಿನ್ನಲು
- ಕರಿಮುಳ್ಳೇಹಣ್ಣು – ಹಣ್ಣು – ತಿನ್ನಲು
- ಬಿಳಿಮುಳ್ಳೇಹಣ್ಣು – ಹಣ್ಣು – ತಿನ್ನಲು

# ಘಟಕದ ಸುತ್ತಲು ಸಿಗುವ ಕಾಡುಮರಗಳು

- ಕಾಸರಕ – ಕ್ರಿಮಿನಾಶಕ
- ನಂದಿ – ಪೀಠೋಪಕರಣ
- ಬೀಟೆ – ಪೀಠೋಪಕರಣ
- ಹೊಳೆಗೇರು
- ಕಣಗಲು – ಪಶುಆಹಾರ
- ಬೈನೆ – ಪ್ರಾಚೀನ ಜಲಹರಣಿ (ಪೈಪ್ ಲೈನ್)
- ಶಮಿಬಿದಿರು – ಕೃಷಿ ಹಾಗೂ ಗೃಹೋಪಯೋಗ
- ಬಿದಿರು – ಗುಡಿಸಲು ನಿರ್ಮಾಣ, ಏಣಿ, ಬುಟ್ಟಿ, ಇತ್ಯಾದಿ
- ಬಸರಿ –
- ಅತ್ತಿ – ಪೂಜೆ ಹಾಗೂ ಚಕ್ಕಲಿ ತಯಾರಿಸಲು ನೀರು

# ಸಸ್ಯಗಳ ಉತ್ಪನ್ನಗಳು ಮತ್ತು ಸಂಗ್ರಾಹಕರು

- ಅಂಟುವಾಳ, ವಾಟೆ – ಸಂಜೀವ ದೇವಡಿಗ
- ಹುಣಸೆ, ಮುರುಗಲು – ಗೋವಿಂದ ಪಟಗಾರ
- ಶೀಗೇಕಾಯಿ – ಗಣಪತಿ ಗುನಗ
- ನೆಲ್ಲಿಕಾಯಿ – ಬೀಣು ಪಟಗಾರ
- ಜೇನುತುಪ್ಪ – ದ್ಯಾವಾ ಗೌಡ
- ಕೌಳಿಕಾಯಿ – ಮರ್ಲ ಸೇರುಗಾರ
- (ಎಲ್ಲರೂ ತಮ್ಮ ಸ್ವಂತ ಬಳಕೆಗಾಗಿ ಇವುಗಳನ್ನು ಸಂಗ್ರಹಿಸುತ್ತಾರೆ)

# ವ್ಯವಸಾಯ ಬೆಳೆಗಳು ಮತ್ತು ತಳಿಗಳು

ಘಟಕದಿಂದ 150 ಮೀಟರ್ ವ್ಯಾಪ್ತಿಯಲ್ಲಿ ಕೃಷಿ ಇಲ್ಲ. ಅದರ ನಂತರ ಈ ಭಾಗದ ಪಾರಂಪರಿಕ ಕೋಣನಕಟ್ಟೆ ತಳಿಯ ಕಬ್ಬನ್ನು ಸುಮಾರು 0–30–00 ಗುಂಟೆ ಕ್ಷೇತ್ರದಲ್ಲಿ ರಾಮಚಂದ್ರ ಹೆಗಡೆ ಗಡಿಕೈ ಮತ್ತು ಅವರ ಬಂಧುಗಳು ಜಂಟಿಯಾಗಿ ಬೆಳೆಯುತ್ತಿದ್ದಾರೆ. ಮಧುರ ರಸ ಹೊಂದಿರುವ ಈ ಕಬ್ಬು ಜೋನಿ ಬೆಲ್ಲ ತಯಾರಿಸಲು ಅತ್ಯುತ್ತಮ.



# ತೋಟಗಾರಿಕೆ ಮತ್ತು ತಳಿಗಳು



- ಘಟಕದ ಕೆಳಭಾಗದಲ್ಲಿ ರಾಮಚಂದ್ರ ಹೆಗಡ ಗಡಿಕ್ಕೈ ಮತ್ತು ಅವರ ಬಂಧುಗಳ ತೆಂಗಿನ ತೋಟವಿದೆ. ಅಲ್ಲಿರುವ ಬೆಳೆಗಳು:
- 1) ತೆಂಗು – ಪಶ್ಚಿಮಘಟ್ಟದೈತ್ಯ (ಫಘಜಣ ಅಠಭಿಣ ಖಿಚಿಟಟ) 2–20–00 ಎಕರೆ (ದಪ್ಪ ತಿರುಳು ಹೊಂದಿರುವ ಎಣ್ಣೆ ತಯಾರಿಸಲು ಉತ್ತಮ ತಳಿ)
- 2) ತೆಂಗು – ಅರಸಿಕೆರೆದೈತ್ಯ (ಂಡಿಭಿುಇಜಡಿಜ ಖಿಚಿಟಟ) 2–00–00 ಎಕರೆ (ಹೆಚ್ಚು ಇಳುವರಿ ನೀಡುವ, ಎಳನೀರಿಗೆ ಉತ್ತಮ ತಳಿ)



# ತೋಟಗಾರಿಕೆ ಮತ್ತು ತಳಿಗಳು



- 3) ಕೋಕೊ (ಅಂತರ್ಬೆಳೆ) – ಫಾರೆಸ್ಟರ್ (ಈ೦ಡಿಚಿಣಜಡಿ) 4–00–00 ಎಕರೆ
- 4) ಅಡಿಕೆ – ಉತ್ತರಕನ್ನಡ ತಳಿ – 5–00–00 ಎಕರೆ (ಹೆಚ್ಚು ಇಳುವರಿ ನೀಡುವ ದೊಡ್ಡ ಗಾತ್ರದ ಅಡಿಕೆ)
- 5) ಮೆಣಸು – (ಅಂತರ್ಬೆಳೆ) – ಫಣಿಯೂರು 5–00–00 ಎಕರೆ (ಹೆಚ್ಚು ಇಳುವರಿ, ಕಡಿಮೆ ನಿರ್ವಹಣೆ)
- 6) ಮೆಣಸು – (ಅಂತರ್ಬೆಳೆ) – ಮಲ್ಲೀಸರ 5–00–00 ಎಕರೆ (ಉತ್ತಮ ಗುಣಮಟ್ಟದ ದಪ್ಪ ಕಾಳು – ತೆಳುವ ಸಿಪ್ಪೆ)






# ತೋಟಗಾರಿಕೆ ಮತ್ತು ತಳಿಗಳು



- 7) ಮೆಣಸು – (ಅಂತರ್ಬೆಳೆ) – ಕರಿಮುಂಡ 5–00–00 ಎಕರೆ (ದೃಢವಾದ ಬಳ್ಳಿ, ಕಡಿಮೆ ನಿರ್ವಹಣೆ, ಪ್ರತಿವರ್ಷ ಇಳುವರಿ)
- 8) ಬಾಳೆ – (ಅಂತರ್ಬೆಳೆ) – ಕರಿಬಾಳೆ (ಭರ್ಗಿ) 2–20–00 ಎಕರೆ (ದೃಢಕಾಯ, ನೆರಳಿನಲ್ಲಿ ಬೆಳೆಯುವ ರುಚಿಕರವಾದ ಹಣ್ಣಿನ ತಳಿ)
- 9) ಬಾಳೆ – (ಅಂತರ್ಬೆಳೆ) – ಏಲಕ್ಕಿ 2–20–00 ಎಕರೆ (ಅಧಿಕ ಇಳುವರಿ ಹಾಗೂ ಅಧಿಕ ಬೆಲೆ)
- 10) ಬಾಳೆ – ವಿರಳವಾಗಿ – ಶಾನಬಾಳೆ s ನೇಂದ್ರ ಬಾಳೆ (ಉತ್ತಮ ತರಕಾರಿ ಹಾಗೂ ಹಪ್ಪಳ s ಸಂಡಿಗೆಯೆ ತಳಿಗಳು), ಚಂದ್ರ ಬಾಳೆ (ಕೆಂಪುಹಣ್ಣು ಹಾಗೂ ಹಪ್ಪಳ s ಸಂಡಿಗೆಯ ತಳಿ)



# ಘಟಕದ ಸುತ್ತಲ ತರಕಾರಿ ಬೆಳೆಗಳು

- ಇಲ್ಲ. ಸುತ್ತಲೂ ಇರುವ ಕೃಷಿ ಕಾರ್ಮಿಕರು ತೊಂಡೆ, ಹಾಗಲು, ಮೆಣಸು, ಮುಂತಾದವನ್ನು ವಿರಳವಾಗಿ ಬೆಳೆಯುತ್ತಾರೆ. ಅಗತ್ಯವಿರುವ ತರಕಾರಿಯನ್ನು ಮಾರುಕಟ್ಟೆಯಿಂದ ತಂದುಕೊಳ್ಳುತ್ತಾರೆ.

# ಗೊಬ್ಬರ – ರಸಗೊಬ್ಬರ ಬಳಕೆ

- ತೆಂಗು: ದಡ್ಡಿ ಗೊಬ್ಬರ ರೂ.15000/= ಹಾಗೂ ರಾಸಾಯನಿಕ ಗೊಬ್ಬರ (ಓಕಪಿ), ರೂ.5000/=
- ಅಡಿಕೆ: ದಡ್ಡಿ ಗೊಬ್ಬರ ರೂ.25000/= ಹಾಗೂ ರಾಸಾಯನಿಕ ಗೊಬ್ಬರ (ಓಕಪಿ), ರೂ.5000/=
- ಬಾಳೆ: ದಡ್ಡಿ ಗೊಬ್ಬರ – ಮೂಲ ಬೆಳೆ (ತೆಂಗು ಅಥವಾ ಅಡಿಕೆ)ಯಲ್ಲಿ ಸೇರಿದೆ ಹಾಗೂ ರಾಸಾಯನಿಕ ಗೊಬ್ಬರ (ಓಕಪಿ), ರೂ.2500/=
- ಕೋಕೊ: ದಡ್ಡಿ ಗೊಬ್ಬರ ರೂ್6500/= ಹಾಗೂ ರಾಸಾಯನಿಕ ಗೊಬ್ಬರ (ಓಕಪಿ), ರೂ.1500/=
- ಮೆಣಸು: ದಡ್ಡಿ ಗೊಬ್ಬರ ರೂ.4000/= ಹಾಗೂ ರಾಸಾಯನಿಕ ಗೊಬ್ಬರ (ಓಕಪಿ), ರೂ.2500/=

# ರಾಸಾಯನಿಕ/ಕೀಟನಾಶಕ/ಶಿಲೀಂಧ್ರನಾಶಕಗಳ ಬಳಕೆ

- ಅಡಿಕೆ, ಕೋಕೊ ಹಾಗೂ ಮೆಣಸಿಗೆ ಬೋರ್ಡೋ ದ್ರಾವಣ ಎನ್ನುವ ತುತ್ತ ಹಾಗೂ ಸುಣ್ಣ ಮಿಶ್ರಣದ ಶಿಲೀಂಧ್ರನಾಶಕ ಬಳಸಲಾಗುತ್ತದೆ. ಫೈಟೋಫ್ತೆರಾ ಎಂಬ ಶಿಲೀಂದ್ರದಿಂದ ಉಂಟಾಗುವ ಕೊಳೆರೋಗ ನಿವಾರಣೆಗೆ. ಅಡಿಕೆಗೆ ಪ್ರತಿ ಎಕರೆಗೆ ತಗಲುವ ವೆಚ್ಚ ರೂ.12,000/=, ಕೋಕೊಕ್ಕೆ ರೂ.3000/= ಹಾಗೂ ಕಾಳುಮೆಣಸಿಗೆ ರೂ.5000/=.
- ಬೇರೆ ಯಾವುದೇ ರಾಸಾಯನಿಕಗಳ ಬಳಕೆ ಇಲ್ಲ.

# ಘಟಕದ ಸುತ್ತಲಿನ ಪರಿಸರ ನಿರ್ವಹಣೆ

- ಘಟಕದಲ್ಲಿರುವ ಮೊದಲ ಕೆರೆ ಖಾಸಗಿ ಹಾಗೂ ಅದರ ಮೇಲ್ಭಾಗದಲ್ಲಿರುವ ಎರಡನೇ ಕೆರೆ ಪಂಚಾಯತದ್ದು. ಈ ಎರಡೂ ಕೆರೆಗಳ ಹೊರಕಾಲುವೆ ಸ್ವಚ್ಛಗೊಳಿಸುವುದು, ಇತ್ಯಾದಿ, ನಿರ್ವಹಣೆಯನ್ನು ಅವುಗಳಿಂದ ಪರೋಕ್ಷವಾಗಿ ದೊರಕುವ ಪ್ರಯೋಜನವನ್ನು ಲಕ್ಷಿಸಿ ಶ್ರೀ ರಾಮಚಂದ್ರ ಹೆಗಡೆ ಹಾಗೂ ಬಂಧುಗಳೇ ಮಾಡುತ್ತಿದ್ದಾರೆ.

# ಘಟಕದ ಸುತ್ತಲಿನ ಇತರ ವಿವರಗಳು

- ಮಣ್ಣು ಹಾಗೂ ನೀರಿನ ಸಂರಕ್ಷಣಾ ವಿಧಾನಗಳನ್ನು ಅಳವಡಿಸಿದ್ದಾರೆ ಹಾಗೂ ಹಸುಗಳಿಗೆ ಮೇವಿನ ಬೆಳೆಗಳನ್ನು (ಜೋಳ, ಗಿನಿ ಹುಲ್ಲು, ಎನ್.ಬಿ.21 ಹುಲ್ಲು, ಸೆಣಬು, ಇತ್ಯಾದಿ) ಬೆಳೆಸುತ್ತಾರೆ, ಸ್ವಚ್ಛತೆ ಕಾಪಾಡಿದ್ದಾರೆ, ಮೀನು ನೈಸರ್ಗಿಕವಾಗಿ ಬೆಳೆಯುತ್ತದೆ.
- ಜೇನು ಸಾಕಾಣಿಕೆ ಇಲ್ಲ, ಘಟಕವನ್ನು ಜಾನುವಾರುಗಳ ಸ್ನಾನಕ್ಕೆ, ಬಟ್ಟೆ ತೊಳೆಯಲು, ಮಲಿನ ಜಲ ವಿಸರ್ಜನೆಗೆ, ಬಳಸಲಾಗುವುದಿಲ್ಲ ಹಾಗೂ ನೀರನ್ನು ಕುಡಿಯಲು ಬಳಸುವುದಿಲ್ಲ.

# ಸಮೂಹ ಆರೋಗ್ಯ

- ಮೊದಲೇ ಹೇಳಿರುವಂತೆ ಈ ಗ್ರಾಮದಲ್ಲಿ ಜನಸಾಂಧ್ರತೆ ಕಡಿಮೆ ಹಾಗೂ ಬಹುತೇಕ ಮನೆಗಳಲ್ಲಿ ಕುಡಿಯುವ ನೀರಿನ ಸಲುವಾಗಿ ಬಾವಿ ಇದೆ.  ಬಾವಿ ಇಲ್ಲದವರಿಗೆ (ಭೈರುಂಬೆ ಪಂಚಾಯತದ ಸುತ್ತಮುತ್ತ) ಪಂಚಾಯತ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿದೆ. ಈ ಗ್ರಾಮದಲ್ಲಿ ಒಟ್ಟೂ 21 ಬ್ರಾಹ್ಮಣರ, 2 ಮರಾಠಿಗರು, 3 ಕುಂದಾಪುರ ಸೇರುಗಾರರು, 2 ಮಾಸೂರು ಹಾಲಕ್ಕಿ ಗೌಡರು, 5 ಹರಿಜನರು, 1 ಲಂಬಾಣಿ, ಮನೆಗಳು ಇವೆ. ಜಲಜನ್ಯ ಆರೋಗ್ಯದ ಸಮಸ್ಯೆಗಳು ಕಡಿಮೆ.

# ಪ್ರಾಣಿ ವೈವಿಧ್ಯತೆ





- ನವಿಲು
- ಕಾನುಕುರಿ
- ಕಾಡುಹಂದಿ
- ಮಂಗ (ಕೆಂಪು ಮೂತಿ ಹಾಗೂ ಕಪ್ಪು ಮೂತಿ)
- ಮೊಲ






(ಇವು ಆಹಾರಕ್ಕಾಗಿ 12 ತಿಂಗಳೂ ಬೆಟ್ಟ ನೀಡುತ್ತವೆ. ಬೇಟೆ ನಿರ್ಬಂಧಿಸಿರುವುದರಿಂದ ಇವುಗಳ ಮಾಹಿತಿ ಕಡಿಮೆ ಆಗು

# ಇರುವೆಗಳು



ಸೌಳಿ (ಕೆಂಜಿರುವೆ)

ಜಾಲ (ನಿರಪಾಯಕಾರಿ)

ಕೊಣಜು ಇರುವೆ

ಕಟ್ಟೇರ (ಕಪ್ಪು ಕಚ್ಚುವ ಇರುವೆ

ಕಚ್ಚುವ ಸಣ್ಣ ಕಪ್ಪು ಇರುವೆ

# ಘಟಕದ ಸುತ್ತಲ ಪಕ್ಷಿಗಳು




ಸುಮಾರು 40 ಪಕ್ಷಿಗಳು ಈ ಭಾಗದಲ್ಲಿ ಬರಿಗಣ್ಣಿಗೆ ಕಾಣುತ್ತವೆ. 'ಕೊಳದ ಬಕ' ಹಾಗೂ 'ಮಿಂಚುಳ್ಳಿ' ಹೊರತು ಪಡಿಸಿದರೆ ಉಳಿದ ಜಲಪಕ್ಷಿಗಳು ಕಾಣುವುದು ವಿರಳ



# ಘಟಕದ ಸಮೀಪದ ದೇವರ ಕಾನುಗಳು

- 1) ರಾಮೇ ದೇವರ ಕಾನು – ರಾಮಲಿಂಗೇಶ್ವರ – 6–00–00 ಎಕರೆ ಸರಕಾರಿ ಕಾಯ್ದಿಟ್ಟ ಅರಣ್ಯ
- 2) ಬಸಪ್ಪನ ಕಾನು – ನಂದಿ – 18–00–00 ಎಕರೆ ಸರಕಾರಿ ಕಾಯ್ದಿಟ್ಟ ಅರಣ್ಯ

# ಘಟಕದ ಸುತ್ತಲ ಉದ್ಯಮಗಳು

- ಘಟಕದ ಪರಿಸರದಲ್ಲಿ ಕೃಷಿ ಹಾಗೂ ತೋಟಗಾರಿಕೆಯನ್ನು ಹೊರತುಪಡಿಸಿ ಇತರ ಉದ್ಯೋಗಗಳು ಇಲ್ಲ

# ಜಲಚಕ್ರೀಕರಣ (ಘಟಣಜಡಿ ಖಜಟಿಧಿಟಿಟುಟಿರ)

- ಭೈರುಂಬೆಯ ಶ್ರೀ ಬಟ್ಟೆವಿನಾಯಕ ದೇವಸ್ಥಾನದ ಪಕ್ಕದಲ್ಲಿ ಶಾಲ್ಮಲಾ ನದಿಗೆ ಕಟ್ಟನ್ನು ನಿರ್ಮಿಸಿ ಅದರ ಪಕ್ಕದಲ್ಲಿರುವ ಒಂದು ಬಾವಿಯಲ್ಲಿ ಸಂಗ್ರಹವಾಗುವ ನೀರನ್ನು 7.5 ಅಶ್ವಶಕ್ತಿಯ ಮೊನೋಬ್ಲಾಕ್ ಪಂಪ್‌ಸೆಟ್‌ನಿಂದ ಪ್ರತಿದಿನ ಅಜಮಾಸು 3 ಲಕ್ಷ ಲೀಟರ್ ನೀರನ್ನು 1.75 ಕಿ.ಮಿ. ದೂರ ಪಂಪ್ ಮಾಡಿ ನೀರಾವರಿಗೆ ಬಳಸಲಾಗುತ್ತಿದೆ. ಇದಕ್ಕೆ ಪ್ರೇರಣೆ ಬೈಫ್ ಸಂಸ್ಥೆ ಗುಜರಾತಿನ ವನ್ಸಾದ ದಲ್ಲಿ ಆದಿವಾಸಿಗಳಿಗೆ ನೀರು ಪೂರೈಸಲು ಮಾಡಿದ ಜಲಗಟ್ಟೆಗಳು. ಇದರಿಂದ ಕೃಷಿಗೆ ಬಳಸಿದ ನೀರು ನೆಲದಲ್ಲಿ ಇಂಗಿ ಪುನಃ ನದಿಯನ್ನು ಸೇರಿ ಅದರ ಹರಿವನ್ನು ಹೆಚ್ಚಿಸಿರುವುದು ಉಲ್ಲೇಖಾರ್ಹ, ಅನುಕರಣೀಯ. ಈ ಹೊಳೆಗೆ ದೇವಸ್ಥಾನಕ್ಕಿಂತ ಮೊದಲು ನಿರ್ಮಿಸಲಾಗುವ 7 ಕಟ್ಟುಗಳಲ್ಲಿ ನೀರಿನ ಹರಿವು ಹೆಚ್ಚಾಗಿರುವುದನ್ನು ಕಳೆದ 10 ವರ್ಷಗಳ ಕಾಲ ಗಮನಿಸಲಾಗಿದೆ. ಈ ವ್ಯವಸ್ಥೆಯ ಪರಿಕಲ್ಪನೆ ಮಾಡಿದವರು ಕೃಷಿ ಹಾಗೂ ನೀರಾವರಿ ತಾಂತ್ರಿಕ ತಜ್ಞ ಶ್ರೀ ಜಿ.ಎಂ.ಹೆಗಡೆ, ಭೈರುಂಬೆ.





# ನೀರು ಇಂಗಿಸುವಿಕೆ

- 1983ರಲ್ಲಿ ಕರ್ನಾಟಕ ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರ ಹಾಗೂ ಹೆಳಗೋಳ ಸೇವಾ ಸಹಕಾರಿ ಸಂಘಗಳ ಸಂಯುಕ್ತ ಆಶ್ರಯದಲ್ಲಿ ನಡೆದಿದ್ದ "ಬೆಟ್ಟ ಅಭಿವೃದ್ಧಿ ಯೋಜನೆ"ಯ ಅಡಿಯಲ್ಲಿ ಸಂಘದ ಬಹುತೇಕ ಸದಸ್ಯರು ತಮ್ಮ ಬೆಟ್ಟದಲ್ಲಿ ಸಹಸ್ರಾರು ಸಸಿಗಳನ್ನು ನೆಟ್ಟಿದ್ದಲ್ಲದೇ ಗಿಡ-ಮರಗಳ ಬುಡದಲ್ಲಿ ಮಳೆನೀರನ್ನು ಇಂಗಿಸಲು ಗುಂಡಿಗಳನ್ನು (ಸಾಸರ್) ನಿರ್ಮಿಸಿದ್ದರು. ಆದರೆ ಹೆಚ್ಚು ಮಳೆ ಬೀಳುವ ಈ ಮಳೆ (ಮಲೆ) ನಾಡಿನಲ್ಲಿ ಇಂಗಿದ ನೀರಿನ ಭಾರಕ್ಕೆ ಬೆಟ್ಟದ ಅಂಚಿನ ಧರೆ ಕುಸಿದು ಹೊಳೆಗಳಲ್ಲಿ ಹೂಳು ತುಂಬಿ ಅವಾಂತರ ಉಂಟಾಯಿತು. ನೀರು ಇಂಗಿಸುವಿಕೆ ಕಡಿಮೆ ಮಳೆಯ ಬಯಲು ಸೀಮೆಗೆ ಹೆಚ್ಚು ಸೂಕ್ತವೇ ಹೊರತು ಮಲೆನಾಡಿಗಲ್ಲ ಎನ್ನುವುದು ರೈತರ ಅಭಿಪ್ರಾಯ.

# ಉಪಸಂಹಾರ

- ಜಲಮೂಲಗಳ ಅಭಾವ, ಅಲ್ಪವೃಷ್ಟಿ, ಮುಂತಾದ ಬವಣೆಗಳಿಂದ ಬಳಲುವ ಜನದಟ್ಟಣೆಯ ಬಯಲು ಸೀಮೆಗೆ ಹೋಲಿಸಿದರೆ ಕಡಿಮೆ ಜನಸಂಖ್ಯೆ, ಹೆಚ್ಚು ಅರಣ್ಯ ಹಾಗೂ ಸಾಕಷ್ಟು ಜಲಸಂಪನ್ಮೂಲ ಹೊಂದಿರುವ ಮಲೆನಾಡಿನಲ್ಲಿ ಜಲಮೂಲದ ಮೇಲೆ ಒತ್ತಡ ಕಡಿಮೆ ಹಾಗೂ ಅವುಗಳ ಸಮೀಪ ಜನವಸತಿ ಇಲ್ಲದಿರುವುದರಿಂದ ಅವುಗಳ ದುರ್ಬಳಕೆ ಅಥವಾ ಮಾಲಿನ್ಯವೂ ಕಡಿಮೆ. ಪರಿಸರದ ಅರಿವೂ ಈ ಗ್ರಾಮದ ಜನತೆಯಲ್ಲಿ ಹೆಚ್ಚಿರುವುದರಿಂದ ಇಲ್ಲಿನ ಅರಣ್ಯಗಳೂ ಇಂದು ಸುಸ್ಥಿತಿಯಲ್ಲಿವೆ. ಈ ಎಲ್ಲ ಕಾರಣಗಳಿಂದ ಭೈರುಂಬೆ ಶುಭ್ರ ನೆಲ-ಜಲ-ಪರಿಸರವನ್ನು ಹೊಂದಿರುವ ಗ್ರಾಮ ಎಂದರೆ ಅತಿಶಯೋಕ್ತಿ ಆಗಲಾರದು.



# ಧನ್ಯವಾದಗಳು